ಸಾಕ್ಷಿಯ ಹೆಸರುಃ ಶ್ರೀಮತಿ ಅನ್ನಪೂರ್ಣ

ದಿನಾಂಕಃ **23-09-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಲ್.ವಿ.ಆರ್. ವಕೀಲರಿಂದಃ

ನಾನು ಭಾಗಾಂಶ ಕೋರಿ ಈ ದಾವೆ ಸಲ್ಲಿಸಿರುತ್ತೇನೆ. ಈ ದಾವೆಯಲ್ಲದೇ ಪಕ್ಕದ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ:20/21 ನ್ನು ರವಿ, ಮಂಜುನಾಥ ಮತ್ತು ರುದ್ರಮಣಿ ಎಂಬುವವರ ವಿರುದ್ಧ ಭಾಗಾಂಶ ಕೋರಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ.ರುದ್ರಮಣಿ ನನ್ನ ಚಿಕ್ಕಮ್ಮ ಮತ್ತು ರವಿ, ಮಂಜುನಾಥ ಅವರ ಮಕ್ಕಳು. ಅಸಲು ದಾವಾ ಸಂಖ್ಯೆ:20/21 ರಲ್ಲಿ ಸರ್ವೆ ನಂ.364/1 ರಲ್ಲಿ 13 ಗುಂಟೆ ಮತ್ತು ಸರ್ವೆ ನಂ.364/2 ರಲ್ಲಿ 1 ಎಕರೆ 7 ಗುಂಟೆ ಜಮೀನಿಗೆ ಸಲ್ಲಿಸಿದ್ದೆ ಎಂದರೆ ಸರಿ. ಈ ಎರಡೂ ಜಮೀನುಗಳು ಕೆ.ಆರ್.ನಗರದ ತಾಲ್ಲೂಕು ಕಸಬಾ ಹೋಬಳಿ, ಲಾಳನಹಳ್ಳಿ ಗ್ರಾಮದಲ್ಲಿವೆ ಎಂದರೆ ಸರಿ. ಈ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಈ ಸ್ವತ್ತುಗಳನ್ನು ಹಾಗೂ ರವಿ, ಮಂಜುನಾಥ ಮತ್ತು ರುದ್ರಮಣಿರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.